ಪದ್ಮಜಾ ಸುಂದರೇಶ್, ಮೈಸೂರು

ನಿಜ ಜೀವನದಲ್ಲಿ ಕಾಣದ ಪ್ರೇತಗಳು ಟಿ.ವಿ. ಧಾರವಾಹಿಗಳಲ್ಲಿ ಕಾಣಿಸಿಕೊಳ್ಳುತ್ತಿವೆಯಲ್ಲಾ...?



ಧಾರವಾಹಿ ಶುರುವಾದಾಗ ಬದುಕಿದ್ದ ನಟರ ಕಾಂಟ್ರಾಕ್ಟ್ ಮುಗಿದಿಲ್ಲದ್ದರಿಂದ ಪ್ರೇತವಾಗಿ ಬಂದು ಅಭಿನಯಿಸುತ್ತಿದ್ದಾರಂತೆ!

ನ.ಸು. ಆನಂದ್, ಕತ್ತರಗುಪ್ಪೆ

ಮೋಹಕ್ಕೂ, ವ್ಯಾಮೋಹಕ್ಕೂ ಇರುವ ವ್ಯತ್ಯಾಸವೇನು ಗುರೂಜಿ?

ಗೌಡರಿಗೆ ಸೀಟಿನ ಮೇಲಿರುವುದು ಮೋಹ, ಮಕ್ಕಳ ಮೇಲಿರುವುದು ವ್ಯಾಮೋಹ!

ಕೆ.ರಾಜಶೇಖರರೆಡ್ಡಿ, ಎಸ್.ಸಡ್ಲಪಲ್ಲಿ

ಕನಸಿನ ನೋಟಿಗೆ ಚಿಲ್ಲರೆ ಎಲ್ಲಿ ಸಿಗುತ್ತದೆ?

ಮರುದಿನದ ಕನಸಿನಲ್ಲಿ!

ಕಾಳೀಹುಂಡಿ ಕೆ.ವಿ. ಶಿವಕುಮಾರ್, ಮೈಸೂರು

ಕಣ್ಣಿಗೆ ಕಾಣದ ನಾಟಕಕಾರ ಯಾರು?



ರೇಡಿಯೋನಾಟಕಗಳ ಪಾತ್ರಧಾರಿ!

ಎಂ.ಬಿ.ಶೋದಾನಪುರ, ಸವದತ್ತಿ

ಎಲ್ಲರೂ ಸಂಪೂರ್ಣವಾಗಿ ಶಾಖಾಹಾರಿಗಳೇ ಆದರೆ?

ಕೋಳಿ, ಕುರಿಗಳಿಗೂ ಕುಟುಂಬಯೋಜನೆ ಜಾರಿಗೆ ತರಬೇಕಾಗುತ್ತದೆ.

ಎಚ್.ಎಸ್. ಶಿವಶಂಕರ್, ಚಿಕ್ಕಲಸಂದ್ರ

ಎಲ್ಲಾ ಬಸ್ಸಿನ ಡ್ರೈವರ್, ಕಂಡಕ್ಟರ್‌ಗಳು ಯಾವಾಗಲೂ ಕೆಂಪು ಟವಲ್‌ಗಳನ್ನೇ ಹಾಕಿಕೊಂಡಿರುವುದು ಏಕೆ?

ರಸ್ತೆಗೆ ಅಡ್ಡ ಮಲಗಿರುವ ಗೂಳಿಗಳನ್ನು ಟವಲ್ ಆಡಿಸಿ ಬೇರೆಡೆಗೆ ಸೆಳೆಯಲು!

ಕುಮಾರ ಚಲವಾದಿ, ಹೊಳೆನರಸಿಪುರ

ಸತ್ಯವನ್ನೇ ಹೇಳುತ್ತೇನೆ, ಸತ್ಯವನ್ನಲ್ಲದೆ ಬೇರೇನೂ ಹೇಳುವುದಿಲ್ಲ ಎಂದು ಸುಳ್ಳನ್ನು ಹೇಳಿದರೆ?

ನುರಿತ ಸಾಕ್ಷಿದಾರ ಎನ್ನುತ್ತಾರಂತೆ!

ಮಹೇಶ್ ಹೆಗಡೆ, ಹೆಗ್ಗೆ

ಸಾರಾಸಗಟಾಗಿ ಸುಳ್ಳು ಹೇಳುವ ಮಹಿಳೆಯರಿಗೆ ರಾಜಕೀಯ ಹೇಳಿ ಮಾಡಿಸಿದ ಹುದ್ದೆಯಲ್ಲವೇ?

ವಕೀಲಿಕೆ ಅದಕ್ಕಿಂತಲೂ ಉತ್ತಮವಾದುದಂತೆ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಹೆತ್ತ ತಾಯಿಯ ಸಹನೆಗೂ, ಭೂತಾಯಿಯ ಸಹನೆಗೂ ಏನು ವ್ಯತ್ಯಾಸ?

ಇವಳು ಸಹನೆ ಕಳೆದುಕೊಂಡರೆ ಮಗ ಹಾಳು, ಅವಳು ಸಹನೆ ಕಳೆದುಕೊಂಡರೆ ಜಗ ಹಾಳು

ಅರಕೆರೆ ಪಿ. ಸುರೇಶ್, ಭದ್ರಾವತಿ

ಮಹಿಳೆಯರನ್ನು ಯಾವಾಗ ಬಜಾರಿಯರು ಎನ್ನಬಹುದು?

ಅಂತಹ ಮಹಿಳೆಯರು ಹತ್ತಿರದಲ್ಲಿ ಇಲ್ಲದಿದ್ದಾಗ!

ಅಶ್ವಿನಿ ವಿ. ಹೆಗಡೆ, ಭೈರುಂಬೆ

ಮಕ್ಕಳಿಗೆ ದೇವರ ಹೆಸರಿಟ್ಟು ರಾಕ್ಷಸರಿಗೆ ಶಪಿಸುವಂತೆ ಬಯ್ಯುವುದು ಏಕೆ?

ದೇವರಿಗೆ ಶಪಿಸುವಂತೆ ಬಯ್ಯಲು ಬೇಕಾದ ಸಂಸ್ಕೃತ ತಿಳಿಯದ್ದರಿಂದ!

ಪಿ.ಎನ್. ಶ್ರೀವತ್ಸ, ಬೆಂಗಳೂರು

ಮುಂದುವರಿದ ಜನಾಂಗದವರು ಲಂಚ ಋಷುವತ್ತುಗಳಿಗೆ ಹೆಚ್ಚಾಗಿ ಭಾಗಿಯಾಗದಿರುವ ಕಾರಣ?

ಅವರಿಗೆ ನೈವೇದ್ಯ, ಕಾಣಿಕೆ, ದಕ್ಷಿಣೆಗಳೇ ಸಾಕಂತೆ!

ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

ಬದುಕಿನ ಲೆಕ್ಕಾಚಾರ ತಪ್ಪಿಹೋಗಿದೆಯಲ್ಲಾ...?

ಆಚಾರ ಸರಿಮಾಡಿಕೊಂಡರೆ ಲೆಕ್ಕಾಚಾರ ತಾನಾಗಿಯೇ ಸರಿಹೋಗುತ್ತದೆ!

ಜೆ. ಕ್ವಾಡ್ರಸ್, ಕಿನ್ನಿಗೋಳಿ

ನೀವು ಕೇಳಿದಿರಿ ವಿಭಾಗಕ್ಕೆ ಅಂತ್ಯ ಯಾವಾಗ?

ಜಗತ್ತಿನ ಎಲ್ಲಾ ಜನಗಳ ಸಮಸ್ಯೆಗೆ ಉತ್ತರ ಸಿಕ್ಕಾಕ್ಷಣ!

## ಬಹುಮಾನಿತ ಪ್ರಶ್ನೆ

ಹೆಚ್.ಆರ್. ಕಡಿವಾಲ, ಬಾದಾಮಿ

ಭಾರತ ಮುಂದುವರಿದ ರಾಷ್ಟ್ರವಾಗಿಸಲು ಏನು ಮಾಡಬೇಕು?

ಹೇಗಾದರೂ ಮಾಡಿ ಮಿಕ್ಕೆಲ್ಲಾ ರಾಷ್ಟ್ರಗಳು ಹಿಂದುವರಿಯುವಂತೆ ಮಾಡಬೇಕು!

ಬಸವಣ್ಣ ಹೊಸಖಾಂಡೆ, ಬಿಜಾಪುರ

ನಿಮ್ಮ ಮನೆ ತಿಪ್ಪೆಗುಂಡಿಯಲ್ಲಿ ಬಾಟಲಿಗಳು, ಸಿಗರೇಟು ತುಂಡುಗಳು ಬೀಳುತ್ತವೆಯೇ?

ಮುಂಚೆ ಇರಲಿಲ್ಲ; ನೀವು ಬಂದುಹೋದಾಗ ನೋಡಿದರೆ ಬರೀ ಅವುಗಳೇ ಇದ್ದವು!

ಎಂ.ಜಿ. ಶಿವರಾಂ, ಬೆಂಗಳೂರು

ಅವನು ಭ್ರಷ್ಟ, ಇವನು ಕಷ್ಟ; ಇವರಿಬ್ಬರ ಮಿಲನದಿಂದ ಜನಗಳಿಗೆ ನಷ್ಟ. ನೀವೇನಂತೀರಿ?

ಮತವ ನೀಡಲು ರಜೆಯ ನೀಡಲು ಜನತೆ ರಂಜನೆಯಲ್ಲಿ ತೊಡಗಲು ಲಾಭಕರ ವಿಧಿ ಕನಸೆ ಕಾಣ!

ಮಲ್ಲಿಕಾರ್ಜುನ ಹ. ಬಗಲಿ

ಗಂಡುಗಳಿಗೆ ಹೆಣ್ಣಿನ ಅತ್ಯಾಕರ್ಷಕ ಅಂಗ ತುಟಿ ಎನ್ನುತ್ತಾರಲ್ಲಾ, ಅದು ಹೇಗೆ?



ತುಟಿ ಅವಳು ತುಂಟಿ ಎಂಬುದನ್ನು ಸೂಚಿಸುತ್ತದಲ್ಲ!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ

ಅವಶ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನ ಕುಸಿಯುತ್ತಿದ್ದರೂ ವ್ಯಾಪಕ ಪ್ರತಿಭಟನೆ ಏಕಿಲ್ಲ?

ಕುಸಿದೂ ಕುಸಿದೂ ಅಭ್ಯಾಸವಾಗಿ ಅದೇ ಜೀವನವೆಂದು ನಂಬಿಬಿಟ್ಟಿರುವುದರಿಂದ.

ಸರ್ದಾರ್ ಎಂ, ಅರಸೀಕೆರೆ

ಸುಖೀ ಕುಟುಂಬಕ್ಕೆ ನಿಮ್ಮ ಸಲಹೆ?

ಇತರರ ಸಲಹೆಗಳನ್ನು ಕೇಳದಿರಿ!

■ ರಾಮ್